ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 10.01.2025.

**ಮುಂದುವರೆದ ಪಾಟೀ ಸವಾಲು – ವಾದಿ ಪರಃ     ವಕೀಲರಿಂದಃ**

ನಿಡಿ-02 ಇದನ್ನು ನನ್ನ ತಾಯಿ ಅಸಲು ದಾವಾ ನಂಬರ 149/2018 ರಲ್ಲಿ ದಾಖಲಿಸಿದ ದಾಖಲೆಯ ದೃಢೀಕೃತ ನಕಲು ಹಾಜರುಪಡಿಸಿದ್ದೇನೆ ಅಂದರೆ ಸರಿ. ನಿಡಿ-02 ಪ್ರಕಾರ ನನ್ನ ತಮ್ಮ ನನಗೆ ನಿಡಿ-02 ನ್ನು ಬರೆದುಕೊಟ್ಟಿದ್ದಾನೆ. ನಿಡಿ-02 ಇದು ಆಸ್ತಿ ನಂಬರ 173/1 ನೇದಕ್ಕೆ ಸಂಬಂಧಿಸಿದಂತೆ ಇರುತ್ತದೆ. ರಿ ಸಾ ನಂಬರ 173/1 ಇದು ಮೂಲತಃ ನಮ್ಮ ತಾಯಿಯ ಜಮೀನು ಇರುತ್ತದೆ. ನಮ್ಮ ತಾಯಿ ನಮಗೆ ಜಮೀನನ್ನು ಬಿಟ್ಟುಕೊಟ್ಟ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ತಾಯಿ, ನಮ್ಮ ಅಕ್ಕಂದಿರು ಸೇರಿ ಊರಿನಲ್ಲಿ ಹಿರಿಯರು ಸೇರಿ ಬರೆದುಕೊಟ್ಟ ದಾಖಲೆ ಹಾಜರುಪಡಿಸಿದ್ದೇನೆ. ಈ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ರಿ ಸಾ ನಂಬರ 173/1 ರಲ್ಲಿ ನಮ್ಮ ತಾಯಿಗೆ ಅವರ ತವರು ಮನೆಯಿಂದ ಬಂದ ಆಸ್ತಿ ಇರುವುದರಿಂದ ನಮಗೆ ಯಾವುದೇ ದಾಖಲೆ ಬರೆದುಕೊಟ್ಟಿಲ್ಲಾ ಎಂದರೆ ಸರಿಯಲ್ಲಾ. ಡ ನಂಬರ 4069 ಪ್ರಕಾರ ರಿ ಸಾ ನಂಬರ 173/2 ಇದು ನಮ್ಮ ತಾಯಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲಾ. ನಿಡಿ-05 ಇದನ್ನು ಆಸ್ತಿ ನಮಗೆ ಹೇಗೆ ಬಂದು ಅಂತಾ ತೋರಿಸಲು ಹಾಜರುಪಡಿಸಿದ್ದೇನೆ ಅಂದರೆ ಸರಿ. ನಮ್ಮ ತಾಯಿ ಮತ್ತು ಸಹೋದರಿಯರು ದಾವಾ ಆಸ್ತಿಯನ್ನು ನಮಗೆ ಬಿಟ್ಟುಕೊಟ್ಟ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲಾ ಅಂದರೆ ಸರಿಯಲ್ಲಾ. ನಿಡಿ-05 ನ್ನು ನಮ್ಮ ಹೆಸರಿಗೆ ದಾಖಲೆ

ಮಾಡಿಕೊಳ್ಳಲು ಕಂದಾಯ ಅಧಿಕಾರಿಯೊಂದಿಗೆ ಮೀಲಾಪಿಯಾಗಿ ದಾಖಲಿಸಿದ್ದೇವೆ ಅಂದರೆ ಸರಿಯಲ್ಲಾ. ನಮ್ಮ ತಾಯಿ ದಾವಾ ಆಸ್ತಿಯನ್ನು ನಮ್ಮ ಹೆಸರಿಗೆ ಯಾವತ್ತೂ ಬಿಟ್ಟುಕೊಟ್ಟಿಲ್ಲಾ ಎಂದರೆ ಸರಿಯಲ್ಲಾ. ದಾವಾ ಆಸ್ತಿ ನಮ್ಮ ತಾಯಿಯದು ಇರುವುದರಿಂದ ನಮಗೂ ಮತ್ತು ವಾದಿಯರಿಗೂ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲಾ.

**<u>ಪಾಟೀ ಸವಾಲು – 2 ನೇ ಪ್ರತಿವಾದಿ ಪರಃ ವಕೀಲರಿಂದಃ</u>**

ನಾನು 3 ನೇ ತರಗತಿಯವರೆಗೆ ವಿಧ್ಯಾಬ್ಯಾಸ ಮಾಡಿರುತ್ತೇನೆ. ನಾನು ಮತ್ತು 1 ನೇ ಪ್ರತಿವಾದಿ 12 ವರ್ಷದಿಂದ ಬೇರೆ ಇರುತ್ತೇವೆ. 2 ನೇ ಪ್ರತಿವಾದಿಗೆ ಯಾವಾಗ ಅಪಗಾತವಾಗಿದೆ ಅಂತಾ ನನಗೆ ನೆನಪಿಲ್ಲಾ. 2 ನೇ ಪ್ರತಿವಾದಿ ಅಪಗಾತ ಆದ ದಿನದಿಂದ ಗಾಳಪೂಜಿ ಗ್ರಾಮದಲ್ಲಿ ವಾಸ ಇದ್ದಾನೆ ಅಂದರೆ ಸರಿಯಲ್ಲಾ. 2 ನೇ ಪ್ರತಿವಾದಿ ಚಿಕ್ಕಬಾಸೂರ ಬಾಡಿಗೆ ಮನೆಯಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಬೆಂಗಳೂರು, ಮಂಗಳೂರು ಇತ್ಯಾದಿ ಕಡೆಗೆ ದುಡಿಮೆ ಮಾಡಲು ಹೋಗುತ್ತಿದ್ದಾ ಎಂದರೆ ಸರಿ. 2 ನೇ ಪ್ರತಿವಾದಿ ವಿವಾಹವಾಗಿ 2 ಮಕ್ಕಳೊಂದಿಗೆ ಬೆಂಗಳೂರಿನಲ್ಲಿ ವಾಸ ಇದ್ದಾ ಎಂದರೆ ಸರಿ. 2 ನೇ ಪ್ರತಿವಾದಿ ತನ್ನ ಜೀವನ ಅವನೇ ಮಾಡಿಕೊಳ್ಳುತ್ತಿದ್ದಾ ಎಂದರೆ ಸರಿ. ಸಾಕ್ಷಿ ಮುಂದುವರೆದು ಜಮೀನಿನಲ್ಲಿ ಬೆಳೆದ ಹಣ ಕೊಡುತ್ತಿದ್ದೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ದುಡಿದು ನಮ್ಮ ಮನೆತನಕ್ಕೆ ಹಣಕೊಡುತ್ತಿದ್ದಾ ಎಂದರೆ ಸರಿಯಲ್ಲಾ. 2 ನೇ ಪ್ರತಿವಾದಿಗೆ ಯ್ಯಾವ ಯ್ಯಾವ ಸಮಯದಲ್ಲಿ ಹಣ ಕೊಟ್ಟಿದ್ದೇನೆ ಅಂತಾ ನನಗೆ ನೆನಪಿಲ್ಲಾ. 2 ನೇ ಪ್ರತಿವಾದಿಗೆ ಹಣ ಕೊಟ್ಟ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. 2 ನೇ ಪ್ರತಿವಾದಿಗೆ 1 ಲಕ್ಷ ಹಣ ಕೊಟ್ಟಿದ್ದೇನೆ ಅಂತಾ

ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ದಾವಾ ಆಸ್ತಿ ಮೂಲತಃ ನನ್ನ ತಾಯಿಯ ಆಸ್ತಿ ಎಂದರೆ ಸರಿ. ವಾದಿಯರು ಮತ್ತು ನಾವು ಶಾಂತಮ್ಮಳ ಮಕ್ಕಳು ಎಂದರೆ ಸರಿ. ನಮ್ಮ ತಾಯಿ ನಮಗೆ ಆಸ್ತಿಯನ್ನು ಬಿಟ್ಟು ಕೊಡದೆ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ದಾವಾ ಆಸ್ತಿಯಲ್ಲಿ ವಾದಿಯರಿಗೂ ಮತ್ತು ಪ್ರತಿವಾದಿಯರಿಗೆ ಸಮನಾದ ಹಕ್ಕು ಇದೆ ಎಂದರೆ ಸರಿಯಲ್ಲಾ. ದಾವಾ ಆಸ್ತಿಯನ್ನು ನಾನು ಒಬ್ಬನೇ ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.